ಮಾಡಿಲ್ಲ. ಅಥವಾ ವಾಟರ್ ರಿಸೋರ್ಸಸ್ ಕೌನ್ಸಿಲ್ ಮೀಟಿಂಗ್ ಕರೆಯುವುದಕ್ಕೆ ಪ್ರಯತ್ನ ಮಾಡಿಲ್ಲ. ಆಮೇಲೆ ಸುಪ್ರೀಂ ಕೋರ್ಟಿನಲ್ಲೂ ಕೂಡ ಏನು ಹೇಳಬೇಕು, ಏನು ಬಿಡಬೇಕು ಎನ್ನತಕ್ಕಂಥ ಪ್ರಜ್ಞೆ ಇಲ್ಲದೇ ಇವರು ತಮ್ಮ ವಕೀಲರಿಗೆ ಬಾಯಿಗೆ ಬಂದಿದ್ದೇ ಹೇಳು ಎಂದು ಅವಕಾಶ ಮಾಡಿಕೊಟ್ಟಿದ್ದು. ಇವತ್ತಿನ ದಿವಸ ಇಕ್ಕಿಟ್ಟಿಗೆ ಸಿಕ್ಕಿಸಿದ್ದಾರೆ. ಕೊನೆಗೆ ಹೇಳುತ್ತಿದ್ದಾರೆ, ನಮ್ಮ ವಕೀಲ ಆ ಮಾತು ಹೇಳಿಯೇ ಇಲ್ಲವೆಂದು ಹೇಳುತ್ತಾರೆ. ಹೇಳದೇ ಇದ್ದರೆ, ಯಾರಾದರೂ ಸುಪ್ರೀಂ ಕೋರ್ಟ್ ಪ್ರೊಸೀಡಿಂಗ್ಸ್‌ನಲ್ಲಿ ಬರೆಯುತ್ತಾರೆಯೇ? ಸುಪ್ರೀಂ ಕೋರ್ಟ್ ಜಡ್ಜಸ್ ಏನು ಹುಚ್ಚರೇ? ಅವರು, ಇವರ ಪ್ಲೀ ಇಲ್ಲದೇ, ಇವರು ಹೇಳಿಕೊಡದೇ ಅಥವಾ ಇವರ ಬ್ರೀಫಿಂಗ್ ಇಲ್ಲದೇ ಇವರ ವಕೀಲ ಹೇಗೆ ಹೇಳುತ್ತಾನೆ? ಇದೆಲ್ಲದಕ್ಕೂ ಇವರೇ ಕಾರಣಕರ್ತರು. ಈ ಜವಾಬ್ದಾರಿಯನ್ನು ಇವರೇ ಹೊತ್ತು ಕೊಳ್ಳಬೇಕು. ರೈತರ ಕಲ್ಯಾಣವನ್ನು ಅಥವಾ ಅವರಿಗೆ ಆಗತಕ್ಕ ನೋವನ್ನು ಲಕ್ಷ್ಯದಲ್ಲಿಟ್ಟುಕೊಳ್ಳದೇ ಇವತ್ತಿನದಿವಸ ಈ ಕೆಲಸ ಮಾಡದಿದಕ್ಕಾಗಿ ಸಂಪೂರ್ಣವಾದ ಹೊಣೆಯನ್ನು ಶ್ರೀಮಾನ್ ನಾಗೇಗೌಡರು ಹೊತ್ತುಕೊಳ್ಳಬೇಕಾಗುತ್ತದೆ, ಈ ಸರ್ಕಾರ ಹೊತ್ತುಕೊಳ್ಳಬೇಕಾಗುತ್ತದೆ. ಮಾನ್ಯ ಜೆ.ಹೆಚ್ . ಪಟೇಲರಂತು ಇವರು ಬರಬೇಕಾಗಿತ್ತು. ಅವರು ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಏನು ಮಾತನಾಡಿದರು ಎಂಬುದನ್ನು ಹೇಳಬೇಕಲ್ಲವೇ? ನಾವು, ನಾವು ಮಾತನಾಡಿಕೊಳ್ಳುತ್ತೇವೆಂದು ಹೇಳಿದರು, ಏನು ಮಾತನಾಡಿದಿರಿ? ತಮಿಳುನಾಡಿನವರ ಜೊತೆಯಲ್ಲಿ ಮಾತನಾಡಿದ ಮೇಲೆ ಮತ್ತೆ ಮಾತನಾಡುತ್ತೇನೆಂದು ಹೇಳಿದಿರಿ. ಮತ್ತೆ 5 ಸುತ್ತಿನ ಮಾತುಕತೆ ಆಯಿತು. ಅದು ಏನಾಯಿತು? ಇದೆಲ್ಲವನ್ನೂ ತಿಳಿಸುವುದಕ್ಕೆ ಮುಖ್ಯಮಂತ್ರಿಗಳು ಬರುತ್ತಾರೆ ಎಂದು ಕೊಂಡಿದ್ದೆವು. ಆದರೆ, ಅವರಿಗೆ ಇವತ್ತು ಪುರಸೊತ್ತು ಇಲ್ಲ. ನಾವೇನಾದರೂ ಹೇಳಿದರೆ ಅವರಿಗೆ ಸಿಟ್ಟುಬರುತ್ತದೆ. ನಿಮ್ಮ ಎಂ.ಪಿ.ಗಳು ಮುಖ್ಯಮಂತ್ರಿಗಳಿಗೆ ಏನು ಹೇಳಿದ್ದಾರೆ, ಆ ಮಾತನ್ನು ನಾನು ನಿಮಗೆ ಹೇಳಿದರೆ ಸಿಟ್ಟು ಬರುತ್ತದೆ. ಆದ್ದರಿಂದ ನಾನು ಹೇಳುವುದು ಬೇಡ. ನಿಮ್ಮ ಬಾಯಿಂದಲೇ ಮುತ್ತಿನ ನುಡಿಗಳು ಬರುತ್ತಾ ಇವೆ, ನಿಮ್ಮವರೇ ಹೇಳುತ್ತಿದ್ದಾರೆ, ಹೇಳಿಕೊಳ್ಳಲಿ. ಆದರೆ, ಕಾವೇರಿ ವಾಟರ್ ಡಿಸ್ ಪ್ಯೂಟ್ ಬಗ್ಗೆ ಇಲ್ಲಿ ರೈಸ್ ಮಾಡಿದ್ದಾರೆ, ಎಲ್ಲರೂ ಮಾತನಾಡುತ್ತಾರೆ, ಅದಕ್ಕೆ ಏನಾದರೂ ಸಮಾಧಾನ ಹೇಳಬೇಕು ಅಥವಾ ತಿಳುವಳಿಕೆ ಕೊಡಬೇಕು, ತಮ್ಮಲ್ಲಿರತಕ್ಕ ಮಾಹಿತಿಯನ್ನು ಹೇಳಬೇಕೆನ್ನುವ ಸೌಜನ್ಯ ಕೂಡ ಇಲ್ಲ, ಅವರು ಇವತ್ತು ಕೂಡ ಬಂದಿಲ್ಲ. ಇದೆಲ್ಲಾ ನೋಡಿದರೆ, ಇವರಿಗೆ ಇದರ ಬಗ್ಗೆ ಆಸಕ್ತಿ ಇಲ್ಲ, ಈ ರೈತರ ಹಿತವನ್ನು ಕಡೆಗಾಣಿಸುತ್ತಾ ಇದ್ದಾರೆ. ಇನ್ನು ಮುಂದೆ ಅವರ ಮಾತನ್ನು ಕೇಳತಕ್ಕಂಥಾದ್ದು ಏನು ಉಳಿದಿದೆ ? ಏನು ಹೇಳಬೇಕೋ ಅದೆಲ್ಲಾ ಹೇಳಿದ್ದೀರಿ. ನೀವು ಹೇಳಿದ ಮೇಲೆ ನಾವು ಕ್ಲಾರಿಫಿಕೇಷನ್ ಕೇಳವುದಕ್ಕೂ ತಯಾರಿಲ್ಲ. ಅದಕ್ಕಾಗಿ ಇದನ್ನು ಪ್ರತಿಭಟಿಸಿ ನಾವು ವಾಕ್ ಔಟ್ ಮಾಡುತ್ತೇವೆ.

(ಕಾಂಗ್ರೆಸ್(ಐ) ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎನ್ . ನಾಗೇಗೌಡ : ಮಾನ್ಯ ಅಧ್ಯಕ್ಷರೇ, ನ್ಯಾಷನಲ್ ವಾಟರ್ ಪಾಲಿಸಿ ಬಗ್ಗೆ ನಾವು ಕಳೆದ ಜನವರಿಯಿಂದ ಐದು ಸಾರಿ ಪ್ರೆಸ್ ಮಾಡಿದ್ದೇವೆ. ಮಾನ್ಯ ದೇವೇಗೌಡರು ಇದ್ದಾಗ ನ್ಯಾಷನಲ್ ವಾಟರ್ ಪಾಲಿಸಿ ಗೈಡ್‌ಲೈನ್ಸ್ ಕೊಟ್ಟಿದ್ದಾರೆ. ಪುನಃ ಫೆಬ್ರವರಿ 1996ರಲ್ಲಿ ಜೆ.ಹೆಚ್. ಪಟೇಲರು